doc-561
T.P-2

Reg No B G 155 12 — 10 —72

In The State First Golden Jubilee Celebrated Paper 'Satyavadi' daily, Mysore 4

56 th Year of Publication

★

News, Views, Dharmic Moral Ethical Matters

ಸತ್ಯವಾದಿ

ರಾಷ್ಟ್ರದಲ್ಲಿ ಪ್ರಥಮ ಸ್ವರ್ಣ ಮಹೋತ್ಸವ ಸಂವೇರಿಸಿದ ಪತ್ರಿಕೆ

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಡಿಸೆಂಬರ್‌ನಲ್ಲಿ ಭೂ ಸುಧಾರಣೆ ತಿದ್ದುಪಡಿ ಮಸೂದೆ ಪರಿಶೀಲನೆ

ಬಸವಣ್ಣನವರು ಮತ್ತು ತಿರುವಳ್ಳುವರು

ಬಸವಣ್ಣನವರು " ಕಣ್ಣುಗಳಿಂದ ದೇವರ ಮೂರ್ತಿಯನ್ನು ನೋಡಬೇಕು : ಮನದಲ್ಲಿ ಧ್ಯಾನಿಸಬೇಕು : ವಚನಗಳಲ್ಲಿ ಅವನ ನಾಮಗಳನ್ನು ಹೇಳಬೇಕು ; ಕಿವಿಗಳಿಂದ ಅವನ ಕೀರ್ತಿಯನ್ನು ಕೇಳಬೇಕು " ಎಂದು ಹಾಡಿದ್ದಾರೆ.

ತಿರುವಳ್ಳುವರು ಇದನ್ನು ಬೇರೆ ವಿಧದಲ್ಲಿ ಹೇಳಿದ್ದಾರೆ. ನಮ್ಮ ತಲೆದೇವರನ್ನು ನಮಸ್ಕರಿಸುವುದು ಇಲ್ಲವೆಂದರೆ ಅದರಿಂದ ಪ್ರಯೋಜನವಿಲ್ಲವೆಂದಿದಾರೆ. ತಲೆ ಎಂದಿದ್ದರೂ ಸಕಲ ಅಂಗಗಳಿಂದಲೂ ದೇವರಿಗೆ ಸೇವೆ ಸಲ್ಲಿಸಬೇಕೆಂದು ವ್ಯಾಖ್ಯಾನ ಬರೆದಿರುವ ಪರಿಮೇಲಳಕರರು ವಿವರಿಸಿದ್ದಾರೆ.

ಕೂಡಲ ಸಂಗನನ್ನು ಪೂಜಿಸಿ ನಾನು ಹುಟ್ಟುಕೆಟ್ಟೆನೆಂದು ಬಸವಣ್ಣವವರು ಹೇಳಿದ್ದಾರೆ.

ತಿರುವಳ್ಳುವರು ಭಗವಂತನ ಪಾದಗಳನ್ನು ಹಿಡಿದುಕೊಂಡರೆ ಜನ್ಮ ಎಂಬ ಸಾಗರದಿಂದ ತಪ್ಪುವೆವು ವಿಂದು ಹೇಳಿದ್ದಾರೆ. ಜನ್ಮ ಎಂಬುದು ದೊಡ್ಡ ಸಾಗರ ; ಅದನ್ನು ಆತ್ಮ ದಾಟುವುದಾದರೆ ಭಗವಂತನ ಪಾದವೆಂಬ ಹಡಗನ್ನು ಹಿಡಿದುಕೊಳ್ಳಬೇಕು.

ಯಾರು ಸಿಟ್ಟು ಮಾಡುವರೋ ಅವರಿಗೆ ಕೇಡು ಬರುವದು ಎಂಬುದನ್ನು ಬಸವೇಶ್ವರರು ಒಂದು ಉದಾಹರಣೆಯಿಂದ ತಿಳಿಸಿದ್ದಾರೆ.

ಯಾವನು ತನ್ನನ್ನು ದುಃಖಗಳಿಂದ ಕಾಪಾಡಿಕೊಳ್ಳಬೇಕೆಂದು ನೆನೆಯುತ್ತಾನೋ ಅವನು ಯಾವ ಕಾರಣಕ್ಕೂ ಸಿಟ್ಟುಮಾಡಬಾರದು ; ಸಿಟ್ಟು ಮಾಡಿದರೆ ಅದು ಅವನನ್ನು ಕೊಂಡೇಹಾಕುವುದು, ಎಂದು ತಿರುವಳ್ಳುವರು ಹೇಳಿದ್ದಾರೆ. [ಕ. ನು]

ದಸರಾ ಸಾಂಸ್ಕೃತಿಕ ಹಾಗೂ ಚಲನ ಚಿತ್ರೋತ್ಸವ ಕಾರ್ಯಕ್ರಮಗಳು

ಇಂದು [12–10–1972] ಸಂಜೆ 4–30 ಗಂಟೆಗೆ ಜೀವಣ್ಣರಾಯನ ಕಟ್ಟೆಯಲ್ಲಿ

ಪ್ರಖ್ಯಾತ ಚಲನಚಿತ್ರ ಹಿನ್ನೆಲೆ ಗಾಯಕರಾದ

ಶ್ರೀ ಮುಕೇಶ್

ಅವರಿಂದ ಚಿತ್ರ ಗೀತೆಗಳು

ಪ್ರವೇಶದರ 50 ಪೈಸೆ

ಲಂಕೆಗೆ ಕನ್ನಡ ಚಲನಚಿತ್ರಗಳು

ಮೈಸೂರು— ಶ್ರೀ ಲಂಕೆಗೆ ಕನ್ನಡ ಚಲನಚಿತ್ರಗಳ ರಫ್ತು ಸಂಭವವಿದೆಯೆಂದು ಫಿಲಂ ಚೇಂಬರ್ ಕಾರ್ಯದರ್ಶಿ ಶ್ರೀ ರಾಜಶೇಖರ್ ಹೇಳಿರುವರು.

★

ಶಾಸನಸಭೆ

ಬೆಂಗಳೂರು— ನವೆಂಬರ್‌ನಲ್ಲಿ ಪ್ರಮುಖ ವಿಷಯವಾದ ಭೂಸುಧಾರಣಾ (ತಿದ್ದುಪಡಿ) ಮಸೂದೆಯ ಚರ್ಚೆಗಾಗಿ ಸೇರಲಿದ್ದ ಶಾಸನಸಭೆಗಳಂ ಡಿಸೆಂಬರಿನಲ್ಲಿ ಸೇರುವ ಸೂಚನೆಯನ್ನು ಮುಖ್ಯ ಮಂತ್ರಿ ಶ್ರೀ ದೇವರಾಜಅರಸ್‌ರವರು ವ್ಯಕ್ತಪಡಿಸಿದರು

★

ಅತಿ ಚಿಕ್ಕ ಕುದುರೆಗಳ ಕ್ಷೇತ್ರ

ಅಮೇರಿಕಾದ ಗೆಟಿಸ್ಬರ್ಗ್‌ಗೆ ೫ ಮೈಲಿ ದೂರದಲ್ಲಿ ವಿಶ್ವದ ಅತಿ ಚಿಕ್ಕ ಕುದುರೆಗಳ ಕ್ಷೇತ್ರವಿದ್ದು, ಅದನ್ನು ಜೀವಮಾನದಲ್ಲಿ ಹಡಗಿನ ಕೆಲಸದಲ್ಲಿದ್ದ ಮೂವರು ನೋಡಿಕೊಳ್ಳುತ್ತಾರೆ.

★

ಭಾರತದ ವನ್ಯಜೀವಿಗಳು

1970 ನೇ ಆಗಸ್ಟ್‌ನಲ್ಲಿ ಭಾರತದ ವನ್ಯಜೀವ ಮಂಡಲಿಯು ಇತ್ತೀಚೆಗೆ ವರದಿಯಲ್ಲಿ, ಭಾರತದ ವನ್ಯಜೀವಿಗಳು ನಾಶವಾಗುವ ಸ್ಥಿತಿ ಒದಗಿದೆ ಎಂದು ತಿಳಿಸಿತ್ತು - ಇವುಗಳ ರಕ್ಷಣೆಗಾಗಿ ಹೊಸ ಶಾಸನಗಳನ್ನು ಜಾರಿಗೆ ತರಲು ಉಪಕ್ರಮಿಸಲಾಗುತ್ತಿದೆ ಎಂದು ಗೊತ್ತಾಗಿದೆ.

★

ಸಸ್ಯಾಹಾರ

ವಿಶ್ವವು ಸಸ್ಯಾಹಾರದ ಕಡೆ ಹೆಚ್ಚು ಗಮನ ಕೊಡುತ್ತಿದೆನ್ನಲಾಗುತ್ತಿದೆ; ಸಸ್ಯಗಳ ಸಂಬಂಧದ ಹಸಿರು ಕ್ರಾಂತಿಯಲ್ಲಿ ಆಹಾರದಲ್ಲಿಯ ಪೋಷಣಾಂಶ ಹೆಚ್ಚುತ್ತಿರುವುದು ಕಂಡುಬಂದಿದೆ.

7 ಲಕ್ಷ ಟ್ಟಿಗಳಷ್ಟು ವಹಿವಾಟು

ಬೆಂಗಳೂರು— ಏಐಸಿಸಿ ಠರಾವಿನಂತೆ ಅಕ್ಕಿ ಗೋಧಿ ಒಟ್ಟಾರೆ ವ್ಯಾಪಾರವನ್ನು ಸರಕಾರ ವಹಿಸಿಕೊಂಡರೆ 7 ಲಕ್ಷ ಟ್ಟಿ ಅಕ್ಕಿ ವಹಿವಾಟು ನಡೆಸುವ ಸಂಭವವಿದೆ

●

ಪರೀಕ್ಷೆಗೆ ತಮ್ಮನ ಬದಲು ಅಣ್ಣ ಕೂತ

ಬಿಜಾಪುರ— ಎಸ್ಸೆಸ್ಸೆಲ್ಸಿ ಸಪ್ಲಿಮೆಂಟರಿ ಪರೀಕ್ಷೆಯ ಗಣಿತ ಪರೀಕ್ಷೆಗೆ ತನ್ನ ಸಹೋದರನ ಬದಲು ಒಬ್ಬ ಬಿಎಸ್ಸಿ ವಿದ್ಯಾರ್ಥಿ ಕೂತು ಬರೆಯುತ್ತಿದ್ದಾಗ ಸಿಕ್ಕಿಬಿದ್ದನು ಪೋಲೀಸರ ವಶಪಡಿಸಲ್ಪಟ್ಟು ಜಾಮೀನಿನ ಮೇಲೆ ಬಿಡಲ್ಪಟ್ಟನು.

★

ಎಂ ಜಿ ಆರ್ ಸನ್ಮಾನದಿಂದ

ಮಡರಾಸು— ಖ್ಯಾತ ಸಿನಿಮಾ ನಟ ಶ್ರೀ ಎಂ ಜಿ ರಾಮಚಂದ್ರರನ್ನು ಡಿಎಂಕೆ ಸನ್ಮಾನ ಮಾಡಿರುವದರ ಪ್ರತಿಕ್ರಿಯೆಯಾಗಿ ಅವರ ಹರದವರ ಗಲಾಟೆ ನಗರ ಹುತ್ತು ಜಿಲ್ಲೆಗಳಲ್ಲಿ ಭೀಕರವಾಗಿ ಪ್ರದರ್ಶಿತವಾಗಿದೆ.

ಮಂಗಳೂರು ಪುರಸಭೆ

ಮಂಗಳೂರು— ಪುರಸಭಾ ಚುನಾವಣೆಯಲ್ಲಿ 35 ಸ್ಥಾನಗಳು ಕಾಂಗ್ರೆಸ್ಸಿಗೆ ಸಿಕ್ಕಿದೆ ; ಜೊತೆಗೆ ಇಬ್ಬರು ಕಮ್ಯೂನಿಸ್ಟರ ಬೆಂಬಲವಿದೆ.

★

ಗೌರ್ನರರು

ತಾ॥ 15 ರಂದು ರಾಜ್ಯಪಾಲರು ಮೈಸೂರಿನ ಮಹಾರಾಜಾ ಕಾಲೇಜು ಕ್ರೀಡಾಮಂಟಪದಲ್ಲಿ ರಾಜ್ಯಮಟ್ಟದ 16 ನೇ ದಸರಾ ಕ್ರೀಡಾ ಕೂಟದ ಪ್ರಾರಂಭೋತ್ಸವವನ್ನು ನೆರವೇರಿಸುವರು; ಹಾಗೂ ಸರ್ವ ದುಃಖ ನಿವಾರಕ ನವಕುಂಡ ಶ್ರೀ ಗಾಯತ್ರಿ ಮಹಾಯಜ್ಞದ ಪೂರ್ಣಾಹುತಿ ಮಹೋತ್ಸವದಲ್ಲಿ ಪಾಲುಗೊಳ್ಳುವರು.

ಸೆರೆಮನೆಯೇ ಮೇಲು

ಮತ್ತೆ ನನ್ನನ್ನು ಸೆರೆಮನೆಗೆ ಕಳುಹಿಸಿಕೊಡಿ, ಎಂದು ಅರವತ್ತೇಳು ವಯಸ್ಸಿನ ವಿಲಿಯಂ ಸೀಲ್ ಪೋಲೀಸರನ್ನು ಬೇಡಿಕೊಂಡ ; ಬೇಡಿಕೆಗೆ ಪುರಸ್ಕಾರ ದೊರೆಯದಿದ್ದುದರಿಂದ ಅವನು ನಿರಾಶನಾದ ; ಆದರೆ ಪ್ರಯತ್ನ ವನ್ನೂ ಬಿಡಲಿಲ್ಲ. ಕೆಲವೇ ನಿಮಿಷಗಳ ನಂತರ ಪೋಲೀಸರು ಅವನನ್ನು ಬಂಧಿಸಬೇಕಾಯಿತು. ಪೋಲೀಸರು ಠಾಣೆಯಿಂದ ಹೊರಗೆ ಬಂದ ಅವನು ಅದರ ಕಿಟಿಗಿಗೇ ಒಂದು ಕಲ್ಲನ್ನು ಬೀರಿದ. "ಕಾರಾಗೃಹಕ್ಕೆ ಮತ್ತೆ ಹೋಗಲು ನನಗೆ ಬೇರೆ ಮಾರ್ಗ ಹೊಳೆಯಲಿಲ್ಲ" ಎಂದ ಅವನು ನಗುತ್ತ ಹೇಳಿದ. ಹೊರಗೆ ಜೀವಿಸುವದಕ್ಕಿಂತ ಸೆರೆಮನೆ ಮೇಲು ಎಂದು ಆತ ಮೊದಲೇ ನಿರ್ಧರಿಸಿದ್ದ. (ಪ್ರ)

ಹತೋಟಿ ಬಟ್ಟೆ

ನವದೆಹಲಿ— ಕಂಟ್ರೋಲ್ಡ್ ಬಟ್ಟೆ ಹಂಚಿಕೆಯ ಹೊಸ ಸ್ಕೀಂ ಮುಂದಿನ ತಿಂಗಳು ಜಾರಿಗೆ ಬರಲಿದೆ.

SHAKTI SUDHA

A Superb Tonic

'ಮಾನವನು ಕೀಳು ಸೃಷ್ಟಿಯ ಧಣಿ, ಶ್ರಿಷ್ಠನೆನ್ನುವುದು ಸೊಕ್ಕಿನ' ಕಲ್ಪನೆ ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ
— ಮಹಾತ್ಮಾ ಗಾಂಧಿ

ಈದೇಶ ಹೊತ್ತ ಚಿತ್ರ ಸಂದೇಶ್ ರವರ ಜೊಚ್ಚಲು ಚಿತ್ರ

ಆನೆ - ಹುಡುಗ

Help The Gorakshana

— Humanitarian Propoganda Monthly ....

Protect the Cow

Edited Printedand Published by Dharmapracharanirata M S Krishna Rao (Propretor) at the Satvavad Press Chamarajapuram Mysore

ವುಡ್‌ಲಾಂಡ್ 13-10-72 ರಿಂದ ಅನೋಫ 3 ನೇ ವಾರ

ರಾಜೇಂದ್ರ ಕುಮಾರ್ ಅರ್ಪಿಸುವ ರೋಸ್ ಮೂವೀಸ್‌ರವರ ಹಿಂದಿ ಕಲರ್ ಅತ್ಯನೋಫ ಚಿತ್ರ

ಜವಾನಿ ದಿವಾನಿ

ಪಾತ್ರ : ರಣಧೀರ್ ಕಪೂರ್, ಜಯಭಾದುರಿ

ದಿನ 3 ಪ್ರದರ್ಶನಗಳು

ಅಪೆರಾ 13 10 72 ರಿಂದ

ಅನೋಫ ಕನ್ನಡ ಚಿತ್ರ

ಬಾಂಧವ್ಯ

ಪಾತ್ರ : ಅಶ್ವತ್ಥ್, ಗಂಗಾಧರ್, ರಾಜೇಶ್, ಬಿ.ವಿ ರಾಧ, ಪಂಡರೀಬಾಯಿ, ಸಂಧ್ಯಾರಾಣಿ, ಜಯಶ್ರೀ, ರಮಾದೇವಿ, ಕುಪ್ಪುರಾಜ್, ರಮೇಶ್, ಮಂಜುನಾಥ್

ಸಂಗೀತ – ರತ್ನಂ ನಿರ್ದೇಶನ : ರತ್ನಾಕರ–ಮಧು

ದಿನ 3 ಪ್ರದರ್ಶನಗಳು

ಅಖಿಲ ಭಾರತದಲ್ಲಿ ಕೂಡಲೇ



ಗೋವಧೆ ನಿಷೇಧವಾಗಲಿ

Quality Printing Neat Binding

Lakshminarasimha Press

Sivarampet, Mysore

ಛತ್ರಿ, ರೇನ್‌ಕೋಟು, ಸೂಟು ಕೇಸು, ಹೋಲ್‌ಆಲ್, ಕಿಟ್ ಬಾಗ್‌ಗಳಿಗೆ

ಬ್ಯಾಂಕ್ ರೋಡ್ ಬಾಹುಸಾರ್, ಮೈಸೂರ್